# ದೇವರಿಗೆ ಹೋದೆವು



ಇರುಳೆಂದು ಕರಗೀತೋ
ಬೆಳಕೆಂದು ಮೂಡೀತೋ
ರೆಪ್ಪೆ ಮುಚ್ಚಿ ಬಿಚ್ಚಿ
ತೆರೆ ತೆರೆದು ನೋಡೇವು
ದೇವರಿಗೆ ಹೋದೆವು.

ಪುಳಕದಿಂದೆದ್ದು
ಹೊಳೆಯಲ್ಲಿ ಮಿಂದೇವು
ಹೊಸ ಬಟ್ಟೆ ಉಟ್ಟೇವು
ಮುತ್ತೋಲೆ ತೊಟ್ಟೇವು
ದೇವರಿಗೆ ಹೋದೆವು

ಮನೆ ಮಂದಿ ನೆರೆದೇವು
ನೆರೆಹೊರೆಯ ಕರೆದೇವು
ಒಡಗೂಡಿ ಪಡೆದೇವು
ದೇವರಿಗೆ ಹೋದೆವು

ಕಾನಲ್ಲಿ ನಡೆದೇವು
ತೊರೆಯೊಂದ ಹಾದೇವು
ಕರ‍್ರಾನೆ ಕರಿ ಬೆಟ್ಟ
ದೇವರಿಗೆ ಹೋದೆವು

ಉಸುಗುಟ್ಟಿ ಬುಸುಗುಟ್ಟಿ
ಸುಡುಗಾಲು ಸುಡುಮೋರೆ
ತಡವುತ್ತ ಎಡವುತ್ತ
ದೇವರಿಗೆ ಹೋದೆವು

ತಂಪಾನೆ ಗಾಳಿಗೆ
ಮೈಯೊಡ್ಡಿ ನಿಂತೇವು
ತಣ್ಣಾನೆ ನೀರಿಗೆ
ಬಾಯೊಡ್ಡಿ ಕುಂತೇವು
ಮೈದುಂಬಿ ಹಾಡುತ್ತಾ
ದೇವರಿಗೆ ಹೋದೆವು

ಸೀರೆ ಕುಬುಸವ ತೊಡಿಸಿ
ಸಿಹಿ ಮೊಸರು ಅನ್ನವ ಬಡಿಸಿ
ಹೂವನ್ನ ಸುರಿದೇವು
ನೋವನ್ನ ಎರೆದೇವು
ಸಿರಿದೇವಿಯ ನೆನೆದೇವು
ದೇವರಿಗೆ ಹೋದೆವು

ಬೆಟ್ಟದಾ ತುದಿಯಲ್ಲಿ
ಬುತ್ತೀಯ ಉಂಡೇವು
ಸೇಡನ್ನ ಸುಟ್ಟೇವು
ಕೇಡನ್ನ ಕಳೆದೇವು
ಕಂಬನಿ ಕರೆದೇವು
ದೇವರಿಗೆ ಹೋದೆವು

ಬ್ಯಾಸರ ಕಳೆದೇವು
ಹರುಷಾವ ಹಡೆದೇವು
ಹಗುರಾಗಿ ಇಳಿದೇವು
ಹೊಸ ಜನುಮ ಪಡೆದೇವು
ದೇವರಿಗೆ ಹೋದೆವು

● **ಸವಿತಾ ನಾಗಭೂಷಣ**